

# ಸನ್ನಿ ಬೆರಗು!

'ನೀಲಿ ಚಿತ್ರ ತಾರೆ' ಸನ್ನಿ ಲಿಯೋನ್ ಭಾರತಲ್ಲಿ ತಮಗೆ ಸಿಗುತ್ತಿರುವ ಜನಪ್ರಿಯತೆ ಕಂಡು ವಿಸ್ಮಿತರಾಗಿದ್ದಾರೆ. ಮಡಿವಂತಿಕೆಯ ದೇಶದಲ್ಲಿ ನೀಲಿ ಚಿತ್ರಗಳಿಂದಲೇ (ಕು)ಖ್ಯಾತಳಾದ ನಟಿಗೆ ಇಷ್ಟೊಂದು ಅವಕಾಶ, ಮೆಚ್ಚುಗೆ ಸಿಗುವುದೆಂದರೆ ಸಣ್ಣ ಮಾತೇ? 'ಬಿಗ್‌ಬಾಸ್'ಗೆ ಕಾಲಿಟ್ಟಾಗಲೇ ಸನ್ನಿ ಜನರಲ್ಲಿ ಒಂದು ರೀತಿ ಕುತೂಹಲ ಮೂಡಿಸಿದ್ದರು. ಈಗ ಆಕೆ ಬಾಲಿವುಡ್‌ನಲ್ಲಿ ಬಿಡುವಿಲ್ಲದ ನಟಿಯರ ಸಾಲಿನಲ್ಲಿ ಗುರ್ತಿಸಿಕೊಳ್ಳುತ್ತಿದ್ದಾರೆ. ಮೊನ್ನೆ ಮೊನ್ನೆ ಕನ್ನಡದ ನೆಲಕ್ಕೆ ಬಂದು 'ಸೇಸಮ್ಮ...' ಎಂಬ ಹಾಡಿಗೆ ಸೊಂಟ ಬಳುಕಿಸಿ ಹೋಗಿದ್ದಾರೆ.

ಸಿನಿಮಾಕ್ಕೆ ಪ್ರಚಾರ, ಗಿಮಿಕ್‌ಗಳು ಬೇಕು ಎಂದಾಗ ನಿರ್ಮಾಪಕರಿಗೆ ಸನ್ನಿ ನೆನಪಾಗುತ್ತಾರೆ. ಹೀಗೆ ಬರುವ ಯಾವ ಅವಕಾಶವನ್ನೂ ಸನ್ನಿ ಒಲ್ಲೆ ಎನ್ನುವುದಿಲ್ಲ. ದೇಹ ಪ್ರದರ್ಶನದ ವಿಚಾರದಲ್ಲಿ ಆಕೆಯ ತಕರಾರು ಎಂದಿಗೂ ಇಲ್ಲವೇ ಇಲ್ಲ. ಇದೇ ಕಾರಣಕ್ಕೆ ಅವರು ಎಲ್ಲರಿಗೂ ಅಚ್ಚುಮೆಚ್ಚು!

ಬಿ–ಟೌನಿನಲ್ಲಿ ಬಣ್ಣ ಹಚ್ಚತೊಡಗಿದ ನಂತರ ಸನ್ನಿಯ ಜನಪ್ರಿಯತೆ ಇಮ್ಮಡಿಗೊಂಡಿದೆಯಂತೆ. ತಾನು ಯಾರು ಎಂಬುದನ್ನು ಇಲ್ಲಿನ ಪುಟ್ಟ ಮಕ್ಕಳೂ ತಿಳಿದುಕೊಂಡಿದ್ದಾರೆ ಎಂದು ಅಚ್ಚರಿ ವ್ಯಕ್ತಪಡಿಸಿದ್ದಾರೆ ಸನ್ನಿ. ಬಾಲಿವುಡ್‌ನಲ್ಲಿ ಭರ್ಜರಿ ಅವಕಾಶಗಳನ್ನು ಗಿಟ್ಟಿಸಿಕೊಳ್ಳುತ್ತಿರುವ ಸನ್ನಿ ಸದ್ಯ ವಯಸ್ಕರ ಚಿತ್ರಗಳಿಂದ ದೂರವೇ ಉಳಿದಿದ್ದಾರೆ. ಆದರೆ ಅವರ ಅಭಿಮಾನಿಗಳ ಸಂಖ್ಯೆ ಹಿಗ್ಗುತ್ತಲೇ ಇದೆ. ಸಣ್ಣ ಊರಿಗೆ ಹೋದರೂ ಅಲ್ಲಿ ಎಲ್ಲರೂ ಪ್ರೀತಿಯಿಂದ ಮಾತನಾಡಿಸುತ್ತಾರೆ, ಅಭಿಮಾನ ತೋರಿಸುತ್ತಾರೆ ಎಂಬ ಖುಷಿ ಅವರದು. 'ಪೋಷಕರೇ ಮಕ್ಕಳನ್ನು ತಮ್ಮ ಪಕ್ಕ ನಿಲ್ಲಿಸಿ ಫೋಟೊ ತೆಗೆದುಕೊಳ್ಳಲು ಹಾತೊರೆಯುತ್ತಾರೆ. ಇದನ್ನು ಭಾರತದಲ್ಲಿ ನಿರೀಕ್ಷಿಸಿಯೇ ಇರಲಿಲ್ಲ. ಬಾಲಿವುಡ್ ಪ್ರವೇಶಿಸಿದ್ದರಿಂದ ಜನರ ಪ್ರೀತಿ, ಅಭಿಮಾನ ಸಿಕ್ಕಿದೆ' ಎಂದು ಹೇಳಿಕೊಳ್ಳುತ್ತಾರೆ ಸನ್ನಿ.

ನೀಲಿ ಚಿತ್ರಗಳನ್ನು ಮಾಡಿರುವುದರ ಬಗ್ಗೆ ಅವರಿಗೆ ಕೊಂಚವೂ ಬೇಸರವಿಲ್ಲ. ಆದರೆ ತಮ್ಮ ವೃತ್ತಿ ಬದುಕಿನ ಮತ್ತೊಂದು ಮಜಲಿಗೆ ಕಾಲಿಟ್ಟಿದ್ದು ಅವರಿಗೆ ಹೊಸ ಅನುಭವ ನೀಡಿದೆಯಂತೆ. ಅಂದ ಹಾಗೆ ಸನ್ನಿಗೆ ಸದ್ಯಕ್ಕೆ ಮಕ್ಕಳು ಬೇಡವಂತೆ. 'ಒಳ್ಳೆಯ ನಟಿಯಾಗಿ ಬೆಳೆಯಬೇಕು. ಆಮೇಲೆ ಮಗುವಾದರೂ ನಟನೆಯಿಂದ ಹಿಂದೆ ಸರಿಯುವುದಿಲ್ಲ' ಎಂದಿದ್ದಾರೆ.



# ಹುಮಾ ಹೋದ್ರು, ರಿಚಾ ಬಂದ್ರು!

ನಿರ್ದೇಶಕ ಅನುರಾಗ್ ಕಶ್ಯಪ್ ಮತ್ತು ನಟಿ ಕಲ್ಕಿ ಕೋಚಿನ್ ಅವರ ವೈವಾಹಿಕ ಬದುಕು ಅಂತ್ಯಗೊಂಡಿದ್ದು ನಟಿ ಹುಮಾ ಖುರೇಷಿ ಅವರಿಂದ ಎಂಬುದು ನಗ್ನ ಸತ್ಯ. ಅನುರಾಗ್ ಅವರ ಅನೇಕ ಸಿನಿಮಾಗಳಲ್ಲಿ ಹುಮಾ ಅವಕಾಶ ಪಡೆದಿದ್ದರು. ಬಳಿಕ ಅವರ ಹೃದಯದೊಳಕ್ಕೂ ಪ್ರವೇಶ ಸಿಕ್ಕಿತು. ಕಲ್ಕಿ ಜತೆಗಿನ ಬಂಧ ಕಳಚಿಕೊಂಡ ನಂತರವಂತೂ ಅನುರಾಗ್ ಮತ್ತು ಹುಮಾ ಯಾವ ಅಡತಡೆಯೂ ಇಲ್ಲದೆ ಓಡಾಡಿಕೊಂಡಿದ್ದರು. ಇಬ್ಬರೂ ಸಪ್ತಪದಿ ತುಳಿಯುತ್ತಾರೆ ಎಂಬ ವರ್ತಮಾನವೂ ಇತ್ತು.

ಆದರೆ ಈಗ ಅನುರಾಗ್ ಬದುಕಿನಲ್ಲಿ ಹೊಸ ನೀರಿನ ಆಗಮನವಾಗಿದೆ. ಹುಮಾ ಜಾಗವನ್ನು ನಟಿ ರಿಚಾ ಚಡ್ಡಾ ಆಕ್ರಮಿಸಿಕೊಳ್ಳುತ್ತಿದ್ದಾರೆ ಎಂಬ ಗಾಳಿಸುದ್ದಿ ಬಿ–ಟೌನಿನಲ್ಲಿ ಕೇಳಿಬರುತ್ತಿದೆ. ರಿಚಾರಿಗೆ ಅವಕಾಶ ಕೊಡಿಸಲು ಅನುರಾಗ್ ಬಿ–ಟೌನ್‌ನಲ್ಲೆಲ್ಲಾ ಓಡಾಡುತ್ತಿದ್ದಾರೆ ಎಂಬುದು ತಾಜಾ ಸುದ್ದಿ. ತಮ್ಮ ಸಹಾಯಕರಾಗಿದ್ದ ನೀರಜ್‌ರ ಮೊದಲ ನಿರ್ದೇಶನದ ಚಿತ್ರಕ್ಕೆ ರಿಚಾ ಚಡ್ಡಾರನ್ನೇ ಅನುರಾಗ್ ಸೂಚಿಸಿದ್ದಾರಂತೆ. ಕಷ್ಟದ ಪಾತ್ರವಾದರೂ ರಿಚಾರಿಗೆ ಅದನ್ನು ನಿಭಾಯಿಸುವ ತಾಕತ್ತಿದೆ ಎಂದು ಅನುರಾಗ್ ಭರವಸೆ ನೀಡಿದ್ದಾರಂತೆ.

■ ಅಮಿ